ಗುರುಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ

218 (581), ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ ಕ್ಷೇತ್ರ)

ಅ) ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕು ಕೇಂದ್ರ ಸಿಂದಗಿ ನಗರದಲ್ಲಿ ಶಿಕ್ಷಕರ ಕಾರ್ಯಚಟುವಟಿಕೆ ಹಾಗೂ ಶಿಕ್ಷಕರ ಸಭೆ ಸಮಾರಂಭಗಳನ್ನು ಮಾಡಲು ಗುರುಭವನ ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಶಿಕ್ಷಕರ ಹಿತದೃಷ್ಟಿಯಿಂದ ಗುರುಭವನ ಕಟ್ಟಡ ನಿರ್ಮಾಣಕ್ಕೆ ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ.

ಆ) ಗುರುಭವನ ಕಟ್ಟಡ ನಿರ್ಮಿಸಲು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸುತ್ತೋಲೆಯನ್ನು ದಿನಾಂಕ:03.10.2013 ರಂದು ಕಳುಹಿಸಲಾಗಿದೆ.

ಕೆಳಕಂಡ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸಿದಲ್ಲಿ ಗುರುಭವನ ನಿರ್ಮಾಣಕ್ಕೆ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ನೀಡಲಾಗುವ ಅನುದಾನದ ಪ್ರಮಾಣವನ್ನು ನಿಗದಿಪಡಿಸಲಾಗುವುದು.

ವಿಸ್ತೀರ್ಣ	ಅನುದಾನ (ಲಕ್ಷ ರೂ.ಗಳಲ್ಲಿ)
30*60 ಅಡಿ ವಿಸ್ತೀರ್ಣದ ಸಭಾಂಗಣಕ್ಕೆ	15.00
40*60 ಅಡಿ ವಿಸ್ತೀರ್ಣದ ಸಭಾಂಗಣಕ್ಕೆ	20.00
15*120 ಅಡಿ ವಿಸ್ತೀರ್ಣ ಹಾಗೂ ಅದಕ್ಕಿಂತ ಹೆಚ್ಚು ವಿಸ್ತೀರ್ಣದ ಸಭಾಂಗಣಕ್ಕೆ	25.00
10*10 ಅಡಿ ವಿಸ್ತೀರ್ಣದ ಕೊಠಡಿಯೊಂದಕ್ಕೆ	1.10

(ಗರಿಷ್ಠ 10 ಕೊಠಡಿಗಳವರೆಗೆ)

ಸಲ್ಲಿಸಬೇಕಾದ ದಾಖಲೆಗಳು

1. ಜಿಲ್ಲಾ/ತಾಲ್ಲೂಕು ಪಂಚಾಯತ್ ಅಥವಾ PWD Asst. Executive Engineer ಇವರಿಂದ ಅನುಮೋದಿಸಲ್ಪಟ್ಟ ಗುರುಭವನ ನಕ್ಷೆ.
2. ಜಿಲ್ಲಾ/ತಾಲ್ಲೂಕು ಪಂಚಾಯತ್ ಅಥವಾ PWD Asst. Executive Engineer ಇವರಿಂದ ಅನುಮೋದಿಸಲ್ಪಟ್ಟ ಗುರುಭವನ ನಿರ್ಮಾಣ ವೆಚ್ಚದ ಅಂದಾಜು ಪಟ್ಟಿ.
3. ಕಟ್ಟಡ ನಿರ್ಮಿಸಲು ಸ್ಥಳೀಯ ಪ್ರಾಧಿಕಾರದಿಂದ ಪಡೆದ ಪರವಾನಗಿ (LICENCE).
4. ಗುರುಭವನ ಸಮಿತಿಯ ಹೆಸರಿನಲ್ಲಿ ನಿವೇಶನ ಇರುವುದಕ್ಕೆ ದಾಖಲೆ.
5. ಗುರುಭವನ ನಿರ್ಮಾಣ ಮತ್ತು ನಿರ್ವಹಣೆಗಾಗಿ ರಚಿಸಿಕೊಳ್ಳಬೇಕಾದ ಸಮಿತಿಯ ಪಟ್ಟಿ.
6. ಕಟ್ಟಡ ನಿರ್ಮಿಸಲು ಸಂಗ್ರಹಿಸಿದ ವಂತಿಗೆ ಅಂದಾಜು ಪಟ್ಟಿಯಲ್ಲಿ ನಮೂದು ಮಾಡಿರುವ ಮೊತ್ತದಲ್ಲಿ ಕನಿಷ್ಠ--20% ರಷ್ಟು ಹಣವನ್ನು ಬ್ಯಾಂಕಿನಲ್ಲಿ ತೊಡಗಿಸಿರುವುದಕ್ಕೆ ಬ್ಯಾಂಕಿನಿಂದ ಪಡೆದ ದಾಖಲೆ.